## ಉತ್ತಮ ಕಾರ್ಯಕ್ರಮ '..ಸಂಹಿತೆ'

ಬಿಗ್ ಬಾಸ್‌ನ ಮೂಲಕ ಚಿರಪರಿಚಿತರಾದ ಸಮೀರಾಚಾರ್ಯ 'ರಾಜ್' ಕನ್ನಡ ವಾಹಿನಿಯಲ್ಲಿ 'ಆಚಾರ್ಯ ಸಂಹಿತೆ' ಎಂಬ ಕಾರ್ಯಕ್ರಮವನ್ನು ತಮ್ಮ ಪತ್ನಿ ಶ್ರಾವಣಿ ಅವರೊಡನೆ ಮಧ್ಯಾಹ್ನ ಅರ್ಧ ಗಂಟೆ ನೀಡುತ್ತಿದ್ದು ಆಸ್ತಿಕರಿಗೂ, ನಂಬಿಕೆಯುಳ್ಳವರಿಗೂ ಅತ್ಯುತ್ತಮ ಕಾರ್ಯಕ್ರಮವೆಂದರೆ ತಪ್ಪಾಗಲಾರದು. ಶ್ರಾವಣಿ ಪ್ರಶ್ನೆ ಕೇಳಿದರೆ ತುಳಸಿ, ಲಿಂಬೆ ಹೀಗೆ ಪ್ರಾಕೃತಿಕ ವಸ್ತುಗಳ ಉಪಯೋಗವನ್ನು ದೇವರ ಹೆಸರಿನಲ್ಲಿ ಉದಾಹರಣೆ ನೀಡಿ, ಪರಿಹಾರ ಸೂತ್ರವನ್ನು ಸಮೀರಾಚಾರ್ಯ ನೀಡುತ್ತಾರೆ. ಶ್ರಾವಣಿಯವರು ಕೇಳುವ ಪ್ರಶ್ನೆಗಳು, ಜನಸಾಮಾನ್ಯರ ಪ್ರಶ್ನೆಗಳು, ಉತ್ತರಗಳಿಂದ ಸಮಯ ಜಾರಿದ್ದೇ ಗೊತ್ತಾಗುವುದಿಲ್ಲ. ಈ ಒಂದು ಉತ್ತಮ ಕಾರ್ಯಕ್ರಮಕ್ಕೆ ಅವಕಾಶ ನೀಡಿದ 'ರಾಜ್' ವಾಹಿನಿಗೆ ಅಭಿನಂದನೆಗಳು.

–ಲಲಿತಾ ಅಂಬಾಗಿಲು, ಉಪ್ಪುಂದ

## ದೇವತೆಗಳಿಗೆ ವಯಸ್ಸೇ ಆಗುವುದಿಲ್ಲ!

ಏಪ್ರಿಲ್ 19ರ ಜಾಣರ ಪೆಟ್ಟಿಗೆಯಲ್ಲಿ ಮುರಳೀಧರ್ ಕುಲಕರ್ಣಿ ಅವರ 'ಯಕ್ಷ ಪ್ರಶ್ನೆಗಳು' ಎಂಬ ಪತ್ರಕ್ಕೆ ಪ್ರತಿಕ್ರಿಯೆ. ದೇವತೆಗಳಿಗೆ, ರಾಕ್ಷಸರಿಗೆ ದೈವ ಭಕ್ತರಿಗೆ, ದಾನಿಗಳಿಗೆ, ಮಾತಾಪಿತೃ, ಗುರುದೇವರನ್ನು ಪೂಜಿಸಿ ಗೌರವಿಸುವವರಿಗೆ, ಪತಿವ್ರತೆಯರಿಗೆ ವಯಸ್ಸು ಆಗುವುದೇ ಇಲ್ಲವಂತೆ. ಇವರೆಲ್ಲಾ ಚಿರಂಜೀವಿಗಳಂತೆ. ಹೀಗಾಗಿ 'ಶನಿ' ಧಾರಾವಾಹಿಯ ಶನಿಯನ್ನು ಬಾಲಕನಾಗಿ ತೋರಿಸಿರುವುದು. ಈ ಧಾರಾವಾಹಿಯ ಕತೆಯಲ್ಲಿನ ಸಂಭಾಷಣೆ, ನೀತಿ ಬಹುಮುಖ್ಯ.

–ಕೆ.ಪಿ. ಸುಜ್ಞಾನಚಾರ್ಯ, ಕಲಿಕೆರೆ

ವಾರದ ಪತ್ರ

## ಸಾಮಾನ್ಯ ಜ್ಞಾನ ಹೆಚ್ಚಳ

ದೂರದರ್ಶನ ಚಂದನದಲ್ಲಿ ಬರುವ 'ಥಟ್ ಅಂತ ಹೇಳಿ' ಕಾರ್ಯಕ್ರಮ ಚೆನ್ನಾಗಿದೆ. ಮೊಬೈಲ್ ಸಂಸ್ಕೃತಿಯಲ್ಲಿ ಓದುವುದನ್ನು ಬಿಟ್ಟು ಅನವರತ ಮೊಬೈಲ್‌ನಲ್ಲಿ ಎಲ್ಲಾ ರೀತಿಯ ಚಟುವಟಿಕೆಯಲ್ಲಿ ಕಾಲಹರಣ ಮಾಡುವ ಯುವ ಜನತೆಗೆ ಪುಸ್ತಕದ ಮಹತ್ವ, ಅದರ ಅರ್ಥಪೂರ್ಣ ಪರಿಚಯ ನೀಡಲಾಗುತ್ತಿದೆ. ಜೊತೆಗೆ ನಿತ್ಯ ಬದುಕಿಗೆ ದಾರಿ ದೀಪವಾಗುವ ಸಲಹೆಯನ್ನು ನೀಡುವಲ್ಲಿ ನಿರೂಪಕರಾದ ನಾ. ಸೋಮೇಶ್ವರ ವೀಕ್ಷಕರ ಮೆಚ್ಚುಗೆ ಗಳಿಸುತ್ತಾರೆ. 'ಥಟ್ ಅಂತ ಹೇಳಿ' ಓದುವ ಮಹತ್ವ ಹಾಗೂ ಸಾಮಾನ್ಯ ಜ್ಞಾನಕ್ಕೆ ಕಾರಣವಾಗಿದೆ. ರಾಜ್ಯದ ಸಮಸ್ತ ಜನರು ವೀಕ್ಷಿಸಬಹುದಾದ ಕಾರ್ಯಕ್ರಮ ಇದಾಗಿದೆ.

–ಕುಬೇರಪ್ಪ ಎಂ. ವಿಭೂತಿ, ಹರಿಹರ

## ವೈವಿಧ್ಯಮಯ 'ಚಂದನ'

ಬೆಂಗಳೂರು ದೂರದರ್ಶನ 'ಚಂದನ ವಾಹಿನಿ' ಜಡತೆಯಿಂದ ಮೈಕೊಡವಿ ನಿಂತಿರುವುದು ಆಶಾದಾಯಕ ಸಂಗತಿ. ಇದೀಗ ವೈವಿಧ್ಯಮಯ ಕಾರ್ಯಕ್ರಮಗಳ ಮೂಲಕ ಎಲ್ಲರ ಗಮನ ಸೆಳೆಯುತ್ತಿದೆ. ಬೆಳಗಿನ 'ಶುಭೋದಯ ಕರ್ನಾಟಕ'ವು ಅತ್ಯುತ್ತಮ ಕಾರ್ಯಕ್ರಮ. ನಿರೂಪಕ ರೆಹಮಾನ್ ಹಾಸನ್ ಅವರ ನಿರೂಪಣೆ, ಮಾತುಗಾರಿಕೆ ಅತ್ಯಂತ ಆಕರ್ಷಕ. ಪದೇ ಪದೇ ಪುನರಾವರ್ತನೆಗೊಳ್ಳುತ್ತಿದ್ದ ಚಲನಚಿತ್ರಗಳಿಲ್ಲದೇ ವೈವಿಧ್ಯಮಯ ಚಿತ್ರಗಳು ಪ್ರಸಾರವಾಗುತ್ತಿವೆ. 'ಥಟ್ ಅಂತ ಹೇಳಿ' ಜನಪ್ರಿಯ ಕಾರ್ಯಕ್ರಮವೇನೋ ಹೌದು. ಆದರೆ ಏಕತಾನತೆ ಹಾಗೂ ಪೇಲವ ನಿರೂಪಣೆಯಿಂದ ಕಾರ್ಯಕ್ರಮ ಸೊರಗುತ್ತಿದೆ.

–ಅಚ್ಚು, ಹುಂಚ

## ರೇಬಿಸ್ ಕ್ವಿಜ್

ಚಂದನವಾಹಿನಿಯ 'ಥಟ್ ಅಂತ ಹೇಳಿ' ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳಿಗೆ ರೇಬಿಸ್ ಬಗ್ಗೆ ನಡೆಸಿ ಕೊಟ್ಟ ಕ್ವಿಜ್ ಕಾರ್ಯಕ್ರಮ ಅತ್ಯಂತ ಮಾಹಿತಿಯುಕ್ತ ಮತ್ತು ಸಾರ್ವಜನಿಕರಿಗೆ ಶಿಕ್ಷಣ ನೀಡಿದ ಅನುಭವವಾಯ್ತು. 2030ರ ಒಳಗೆ ಭಾರತವನ್ನು ರೇಬಿಸ್ ಮುಕ್ತ ಮಾಡುವ ಮಹದಾಶಯವನ್ನು ಪದೇ ಪದೇ ಹೇಳಿದ್ದಾರೆ. ರೇಬಿಸ್‌ಗೆ ಚಿಕಿತ್ಸೆ ಇಲ್ಲ. ಮುಂಜಾಗ್ರತೆ ಇದ್ದರೆ ಖಂಡಿತವಾಗಿಯೂ ರೇಬಿಸ್ ಮುಕ್ತ ಆಗಬಹುದು.

ಬಹುಪಾಲು ಹುಚ್ಚು ನಾಯಿ ಕಡಿತದಿಂದ ರೇಬಿಸ್ ಬರುವುದು. ಜೊಲ್ಲು ಮತ್ತು ಮೂತ್ರದಲ್ಲಿ ವೈರಾಣುಗಳಿರುತ್ತವೆ. ಗಾಯವಾದ ಜಾಗವನ್ನು ಸಾಬೂನಿನಿಂದ ಸತತವಾಗಿ ಹರಿಯುತ್ತಿರುವ ನೀರಿನಲ್ಲಿ 15 ನಿಮಿಷಗಳವರೆಗೆ ತೊಳೆಯಬೇಕು. ನಂತರ ವೈದ್ಯರಲ್ಲಿ ತೋರಿಸಿ ಇಂಜೆಕ್ಷನ್ ಹಾಗೂ ಲಸಿಕೆಯನ್ನು ತೆಗೆದುಕೊಳ್ಳಬೇಕು. ನಾಟಿ ವೈದ್ಯ ಮತ್ತು ಮೂಢ ನಂಬಿಕೆಯ ಮಂತ್ರ ತಂತ್ರಗಳಿಗೆ ಮೊರೆ ಹೋಗಬಾರದು ಎಂಬ ಅಂಶವನ್ನು ಮನಮುಟ್ಟುವಂತೆ ಡಾ. ನಾ. ಸೋಮೇಶ್ವರ ಅವರು ನಿರೂಪಿಸಿದರು. ಭಾಗವಹಿಸಿದ ಸ್ಪರ್ಧಿಗಳು ತಪ್ಪಿಲ್ಲದೆ ಉತ್ತರಗಳನ್ನು ನೀಡಿದ್ದು, ವಿದ್ಯಾರ್ಥಿಗಳ ಪೂರ್ವ ತಯಾರಿ ಚೆನ್ನಾಗಿಯೇ ಇತ್ತು. ಪ್ರತಿ ಉತ್ತರದ ನಂತರ ಸಂಬಂಧಿಸಿದಂತೆ ವಿವರಣೆ ನೀಡಿದರು. ಇಂತಹ ಸಾಮಾಜಿಕ ಕಳಕಳಿಯ ಕಾರ್ಯಕ್ರಮಗಳು ಹೆಚ್ಚು ಹೆಚ್ಚು ಮೂಡಿಬರಲಿ.

–ಕೆ.ಎನ್. ಪ್ರಭಾಕರ ಗುಪ್ತ, ಹಾಸನ

## ಗುಣಮಟ್ಟವಿಲ್ಲದ ಕ್ರಿಕೆಟ್ ಕಮೆಂಟ್ರಿ

ಈ ವರ್ಷದ ಐಪಿಎಲ್ ಕಮೆಂಟರಿಯನ್ನು ಕನ್ನಡದಲ್ಲಿ ಕೇಳೋಣ ಎಂದು ಹೊರಟೆ. ಬಹಳ ಭಯಾನಕವಾಗಿತ್ತು. ಅದಕ್ಕಿಂತಲೂ ಬಹಳ ಕೀಳಾಗಿ ಕೇಳಿಸಿತು. ಬೀದಿ ಭಾಷೆಯಲ್ಲಿ ಕ್ರಿಕೆಟ್ ಬಗ್ಗೆ ಮಾತಾಡುತ್ತಿದ್ದಂತೆ ಕೇಳಿಸಿತು. ಕನ್ನಡ ಎಂದ ಮಾತ್ರಕ್ಕೆ ಪೋರ್ಕಿಯಂತೆ ಮಾತಾಡಬೇಕೇ? ಬಹುಶಃ ಕಮೆಂಟೇಟರ್‌ಗಳ ಮಾತುಗಾರಿಕೆಯ ಕೊರತೆ, ಧ್ವನಿಯ ಗುಣಮಟ್ಟ, ಕನ್ನಡದ ಅರಿವಿನ ಕೊರತೆ ಇವೆಲ್ಲವೂ ಇದಕ್ಕೆ ಕಾರಣ ಇರಬಹುದು. ಆಟಗಾರರೆಲ್ಲರೂ ಒಳ್ಳೆಯ ಮಾತುಗಾರರಿರುವುದಿಲ್ಲ. ಒಬ್ಬ ಸೂಕ್ತ ವ್ಯಕ್ತಿಯಿಂದ ಕಿಂಚಿತ್ತಾದರೂ ಘನವಾದ ಕನ್ನಡದ ಬಳಕೆಯಿಂದ ಕೂಡಿದ ಕಮೆಂಟರಿ ಬಂದರೆ ಕನ್ನಡದ ಮಾನ ಉಳಿಯುತ್ತದೆ.

–ವಿನಯ್ ಎಂ.ಎಸ್., ಬೆಂಗಳೂರು

## ಜನಪದದ ಮೋಡಿ

ಝೀ ಕನ್ನಡದಲ್ಲಿ ಏ.28 ಮತ್ತು 29ರಂದು ಪ್ರಸಾರವಾದ ಸರಿಗಮಪ ಲಿಟ್ಲ್ ಚಾಂಪ್ಸ್ ಕಂತಿನಲ್ಲಿ ಜನಪದ ಹಾಡುಗಳ ಸುತ್ತನ್ನು ಪ್ರಸ್ತುತಪಡಿಸಲಾಯಿತು. ಚಲನಚಿತ್ರಗಳಲ್ಲಿ ಬಳಸಲಾದ ಜನಪದ ಹಾಡುಗಳನ್ನು ಮಕ್ಕಳು ಸುಶ್ರಾವ್ಯವಾಗಿ ಹಾಡಿ ವೀಕ್ಷಕರನ್ನು ರಂಜಿಸಿದರು. ವಿಶೇಷ ಅತಿಥಿಯಾಗಿ ಆಗಮಿಸಿದ್ದ ಖ್ಯಾತ ಗಾಯಕಿ ಹಾಗೂ ಶಾಸ್ತ್ರೀಯ ಸಂಗೀತಗಾರ್ತಿ ಸಂಗೀತಾ ಕಟ್ಟಿ ಅವರು ಬೇಂದ್ರೆಯವರ 'ಶ್ರಾವಣ ಬಂತು ಕಾಡಿಗೆ.. ಬಂತು ನಾಡಿಗೆ..' ಹಾಡನ್ನು ಹಾಡಿದ್ದು ಕಾರ್ಯಕ್ರಮದ ಹೈಲೈಟ್ ಆಗಿತ್ತು.

– ಕೀರ್ತಿ ತಂತ್ರಿ, ಬೆಂಗಳೂರು

## ಅಶುದ್ಧ ಭಾಷೆ

ಅಗ್ನಿ ಸಾಕ್ಷಿ ಧಾರಾವಾಹಿಯಲ್ಲಿ ಕೌಶಿಕ್ ಮನೆಯವರಿಗೆಲ್ಲಾ ನಿದ್ದೆ ಔಷಧಿ ಹಾಕಿದ್ದರಿಂದ ಎಲ್ಲರೂ ಗಾಢ ನಿದ್ದೆಯಲ್ಲಿರುತ್ತಾರೆ. ಸನ್ನಿಧಿ ಗಂಡನನ್ನು 'ಎದ್ದೋಳಿ ಎದ್ದೋಳಿ' ಎಂದು ಎಬ್ಬಿಸುತ್ತಾಳೆ. ಹಾಗೆಯೇ ಆಯುಷಿ ಸಹ ಅಂಜಲಿಗೆ 'ಎದ್ದೋಳಿ ಎದ್ದೋಳಿ' ಎನ್ನುತ್ತಾಳೆ. ಎದ್ದೇಳಿ ಅಥವಾ ಎದ್ದೇಳು ಎನ್ನುವ ಪದ ಎದ್ದೋಳಿ ಹೇಗಾಯಿತು. ಪಾತ್ರಧಾರಿಗಳಿಗೆ ಕನ್ನಡ ಗೊತ್ತಿಲ್ಲವೋ ಸಂಭಾಷಣೆ ಬರೆಯುವವರಿಗೆ ಗೊತ್ತಿಲ್ಲವೋ?

—ಹೆಚ್. ವಿ. ಕೃಷ್ಣಮೂರ್ತಿ